ಬೆಂಗಳೂರು
BENGALURU
ಭಾನುವಾರ, 20 ಫೆಬ್ರವರಿ 2011
No.MNG/121/2009-11
Mangalore
Bengaluru
Shimoga

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ

HOSADIGANTHA KANNADA DAILY

ಸಂಪುಟ 18 | ಸಂಚಿಕೆ 172 | ಪುಟ VIII | ಬೆಲೆ ₹ 3.50 | ಮಂಗಳೂರು - ಬೆಂಗಳೂರು - ಶಿವಮೊಗ್ಗ

e-paper
http://www.hosadigantha.in/epaper
e-mail
hosadi@gmail.com
digantha@yahoo.com
Website
www.hosadigantha.in

ಪ್ರಾಯೋಜಿತ ಪುರವಣಿ

## ಸಾರ್ಥಕ ಸಾವಿರ ಹೆಜ್ಜೆಗಳು

ಮಾದರಿ ಕರ್ನಾಟಕದ ಆವಿಷ್ಕಾರ
ಗ್ರಾಮೀಣಾಭಿವೃದ್ಧಿಯ
ನವ ಮನ್ವಂತರ

1000



ಜನಪರ ಮತ್ತು ಅಭ್ಯುದಯಮುಖಿ ನಾಡಾಗಿ ರೂಪುಗೊಳ್ಳಲು ಸರ್ವಾಂಗೀಣ ಅಭಿವೃದ್ಧಿ ಅತ್ಯಗತ್ಯ. ಮುಖ್ಯಮಂತ್ರಿ ಯಡಿಯೂರಪ್ಪ ಎಷ್ಟೇ ರಾಜಕೀಯ ಒತ್ತಡಗಳು, ಸಮಸ್ಯೆಗಳ ಮಧ್ಯೆಯೂ ಜನ ಕಲ್ಯಾಣವನ್ನು ಮರೆತಿಲ್ಲ. ಎಲ್ಲಾ ತಾಕಲಾಟಗಳ ನಡುವೆಯೂ ಪ್ರತಿ ವರ್ಷ ಹತ್ತಾರು ಹೊಸ ಹೊಸ ಯೋಜನೆಗಳನ್ನು ಜಾರಿಗೊಳಿಸುವಲ್ಲಿ ಯಡಿಯೂರಪ್ಪ ಅವರು ಒಂದು ಹೆಜ್ಜೆ ಮುಂದೆಯೇ ಇದ್ದಾರೆ. ಇವರ ಪಾಲಿಗೆ ಅಭಿವೃದ್ಧಿಯೇ ಆಡಳಿತದ ಮೂಲಮಂತ್ರವಾಗಿದೆ. ಅವರ ದೂರದೃಷ್ಟಿಯಿಂದಾಗಿ ಕೈಗಾರಿಕೆ, ವಿದ್ಯುತ್, ಶಿಕ್ಷಣ, ಮೂಲಭೂತ ಸೌಕರ್ಯ ಹಾಗೂ ಎಲ್ಲಾ ಕ್ಷೇತ್ರಗಳಲ್ಲೂ ಕರ್ನಾಟಕ ದಾಪುಗಾಲಿಡುತ್ತಿದೆ. ಸರ್ವಾಂಗೀಣ ಅಭಿವೃದ್ಧಿಯ ಸಾರ್ಥಕ ಸಾಧನೆಗಳೊಂದಿಗೆ ಬಿಜೆಪಿ ಸರ್ಕಾರ ಇದೀಗ ಸಾವಿರ ದಿನಗಳನ್ನು ಪೂರೈಸುತ್ತಿದೆ ”

## ಪ್ರಶ್ನಾತೀತ ನಾಯಕನ ಕ್ರಾಂತಿಕಾರಕ ಹೆಜ್ಜೆಗಳು

■ ಎಸ್.ಶಾಂತಾರಾಂ

ಬಿ.ಎಸ್.ಯಡಿಯೂರಪ್ಪ ನೇತೃತ್ವದ ರಾಜ್ಯ ಬಿಜೆಪಿ ಸರ್ಕಾರ , ರಾಜ್ಯದ ಸರ್ವಾಂಗೀಣ ಪ್ರಗತಿಯನ್ನು ಸಾಧಿಸುತ್ತ ಸಾರ್ಥಕ ಸಾವಿರ ದಿನಗಳನ್ನು ಯಶಸ್ವಿಯಾಗಿ ಪೂರೈಸಿದೆ. ಹತ್ತಾರು ಕ್ರಾಂತಿಕಾರಕ ನಿರ್ಧಾರಗಳನ್ನು ಕೈಗೊಳ್ಳುವುದರೊಂದಿಗೆ ಸಾಧನೆಯ ಹಾದಿಯಲ್ಲಿ ಸದೃಢ ಹೆಜ್ಜೆಯನ್ನಿಟ್ಟು ಸರ್ಕಾರ ಮುನ್ನಡೆಯುತ್ತಿದೆ. ಎಲ್ಲಾ ವರ್ಗದ ಜನತೆಯ ನೋವುಗಳಿಗೆ ಸ್ಪಂದಿಸುತ್ತ ನೂರಾರು ಜನಪರ ಯೋಜನೆಗಳನ್ನು ರಾಜ್ಯದ ಜನತೆಗೆ ನೀಡುತ್ತಿರುವ ಬಿ.ಎಸ್.ಯಡಿಯೂರಪ್ಪರವರ ಸಮರ್ಥ ನಾಯಕತ್ವದಲ್ಲಿ ಸರ್ಕಾರ ದಶಕಗಳ ಸಂಕಲ್ಪ ತೊಟ್ಟು ನೂರಾರು ಸಾಧನೆಗಳ ಹೊಸ ಶಕೆಯನ್ನು ಆರಂಭಿಸಿದೆ.

### ಕಾಯಕ ಯೋಗಿಯ ನಡೆ

ರೈತರ ಏಳಿಗೆಯ ಬಗ್ಗೆ ರಾಜ್ಯದ ಅಭಿವೃದ್ಧಿಯ ಬಗ್ಗೆ ಮುಖ್ಯಮಂತ್ರಿ ಯಡಿಯೂರಪ್ಪ ಕೇವಲ ಮಾತಾಡಲಿಲ್ಲ. ವಿರೋಧ ಪಕ್ಷದಲ್ಲಿ ಗಳಿಸಿದ ದೀರ್ಘಕಾಲದ ಅನುಭವವು ಅವರನ್ನು ಪಕ್ವ ಯೋಜನೆಗಳ ಮೂಲಕ ರಾಜ್ಯವನ್ನು ಕಟ್ಟುವ ಕಾಯಕಕ್ಕೆ ಜೋಡಿಸಿದೆ.ಹೀಗಾಗಿ ಅಧಿಕಾರ ಸಿಕ್ಕಾಗ ರಾಜ್ಯದ ಜನರು ಸದಾ ಸ್ಮರಿಸುವ ಹಲವಾರು ಶಾಶ್ವತ ಯೋಜನೆಗಳಿಗೆ ಯಡಿಯೂರಪ್ಪ ಚಾಲನೆ ನೀಡಿದ್ದಾರೆ.ಅಧಿಕಾರವಿದ್ದಾಗ ಜನತೆಗಾಗಿ , ರಾಜ್ಯದ ಸರ್ವಾಂಗೀಣ ಪ್ರಗತಿಗೆ ಏನೆಲ್ಲಾ ಮಾಡಲು ಸಾಧ್ಯವಿದೆಯೋ ಅವೆಲ್ಲಕ್ಕೂ ನಿಷ್ಠೆಯಿಂದ ಶ್ರಮಿಸುತ್ತಿರುವ ಮುಖ್ಯಮಂತ್ರಿ ಯಡಿಯೂರಪ್ಪ ನಿಜವಾದ ಅರ್ಥದಲ್ಲಿ ಕಾಯಕಯೋಗಿ .

ಮುಖ್ಯಮಂತ್ರಿಗಳೇ ಹೇಳುವಂತೆ ಕಳೆದ ಸಾವಿರ ದಿನಗಳಲ್ಲಿ ಸರ್ಕಾರದ ಸಾಧನೆಗಳನ್ನು ನೋಡಿರುವ ವಿರೋಧ ಪಕ್ಷಗಳಲ್ಲಿ ಆಗಲೇ ಆತಂಕ ಮೂಡಿದೆ ಎನ್ನುವುದು ನಿಜ. ಈ ಸರ್ಕಾರ ಮುಂದುವರಿದರೆ ತಮಗೆ ಶಾಶ್ವತವಾಗಿ ವಿರೋಧ ಪಕ್ಷವೇ ಗತಿ ಎನ್ನುವ ಭಯ ಮೂಡಿರುವುದು ವಿರೋಧ ಪಕ್ಷಗಳ ಮುಖಂಡರ ನಡವಳಿಕೆಯಿಂದಲೇ ಅರ್ಥವಾಗುತ್ತಿದೆ.ಆದರೆ ಯಡಿಯೂರಪ್ಪ ಒಂದು ಹಂತದ ವರೆಗೂ ವಿರೋಧಿಗಳ ಟೀಕೆಗಳಿಗೆ ಪ್ರತಿಕ್ರಿಯಿಸಿದರಾದರೂ , ನಂತರ ತಮ್ಮ ಸಾಧನೆಗಳು ಜನರಿಗೆ ಮನವರಿಕೆಯಾದರೆ ಸಾಕು, ವಿಪಕ್ಷಗಳನ್ನು ಮೆಚ್ಚಿಸಿ ತಮಗೆ ಏನೂ ಆಗಬೇಕಾಗಿಲ್ಲ ಎನ್ನುವ ನಿಲುವಿಗೆ ಬಂದುಬಿಟ್ಟಿದ್ದಾರೆ. ಟೀಕೆಗಳಿಗೆ ಹೆದರದೇ, ಜನರ ಆಶಯಗಳಿಗೆ ಸ್ಪಂದಿಸಿದರೆ ಅದೇ ವಿಪಕ್ಷಗಳ ಟೀಕೆಗೆ ಉತ್ತರ ಎಂದು ನಿರ್ಲಿಪ್ತರಾಗಿಬಿಟ್ಟಿದ್ದಾರೆ. ಇದು ನಿರೀಕ್ಷಿತ ಫಲವನ್ನೂ ನೀಡುತ್ತಿದೆ.

8ನೇ ಪುಟ ನೋಡಿ